**OS 14/2024**

ಪಿಡಬ್ಲ್ಯೂ೩

ದಿನಾಂಕ 27.07.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಃ 1 ನೇ ಪ್ರತಿವಾದಿ ಪರಃ ಶ್ರೀ ವಿ ಜೆ ಎ ವಕೀಲರಿಂದಃ

ಈ ದಾವೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಶೀನ ಅಚಾರ್ಯರವರನ್ನು 30 ವರ್ಷದ ಮುಂಚೆ ನೋಡಿರುತ್ತೇನೆ. ಶೀನ ಆಚಾರ್ಯ ರವರ ತಾಯಿಯ, ಮಗ, ಹೆಂಡತಿಯ ಹೆಸರು ಗೊತ್ತಿಲ್ಲ. 1 ನೇ ಪ್ರತಿವಾದಿಯ ಪರಿಚಯ ಇಲ್ಲ. ನಾನು ಶೀನ ಆಚಾರ್ಯ ರವರ ತೋಟದ ಕುಟುಂಬದ ಮನೆಗೆ ಕಿಟ್ಟ @ ಕೃಷ್ಣ ಆಚಾರ್ಯ ಮತ್ತು ಕಮಲ ರವರು ಇರುವ ಸಮಯದಲ್ಲಿ ಹೋಗಿರುತ್ತೇನೆ. ನಾನು ತೋಟದ ಮನೆಗೆ ಕೊನೆಯದಾಗಿ 1982 ರಲ್ಲಿ ಹೋಗಿರುತ್ತೇನೆ. ಕಳೆದ 55 ವರ್ಷದಿಂದ ಶೀನ ಅಚಾರ್ಯರವರ ಮಗ 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ತೋಟದಮನೆಯಲ್ಲಿ ವಾಸ ಇದ್ದಾರೆ ಎಂದರೆ ಇರಬಹುದು. ನಾನು 3 ನೇ ವಾದಿಗೆ ಸಹಾಯ ಮಾಡಲು ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ಈ ದಿನ 3 ನೇ ವಾದಿ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತಾರೆ. 3 ನೇ ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ವಾದಿಯವರು ಹೇಳಿಕೊಟ್ಟ ಹಾಗೇ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ನನಗೆ ಗೊತ್ತಿರುವುದನ್ನು ನಾನು ಹೇಳಿದ್ದೇನೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ